# ಇದು ಬರೀ ಕಲೆಯಲ್ಲ; ಚೆಲುವಿನ ಚಿತ್ತಾರ!



ಕುಸುಮ



ಸೃಜನಶೀಲ ಕಲೆ ರಂಗೋಲಿ ಜತೆಗೆ ಹಲವು ಕಲಾಪ್ರಕಾರಗಳಲ್ಲಿ ಕೈಯಾಡಿಸಿದ ಕುಸುಮ ಅವರ ಕೌಶಲ ನೋಡುಗರನ್ನು ಬೆರಗಾಗಿಸುತ್ತದೆ.

■ **ವಾಸುದೇವ ಕೆ.**

ಕಲೆಯಲ್ಲಿ ಅದೆಷ್ಟು ಬಗೆ! ಸೃಜನಶೀಲತೆ, ಕಲಾತ್ಮಕತೆ, ಚಾಕಚಕ್ಯತೆ ಮೇಲಾಗಿ ಆಸಕ್ತಿ ಇದ್ದರೆ ಕಲೆ ದಳದಳವಾಗಿ, ಚಿತ್ರವಿಚಿತ್ರವಾಗಿ, ಘಮಘಮ ಹೂವು ಅರಳಿದ ಹಾಗೆ ಸರಸರನೆ ಅರಳುತ್ತದೆ. ಈ ಚಿತ್ರಗಳಲ್ಲಿರುವ ಸೃಜನಶೀಲತೆ ನೋಡಿ. ಕಲಾವಿದೆಯ ಆಸಕ್ತಿ ಇಲ್ಲಿ ರಂಗೋಲಿ, ಕುಂದನ್, ಫ್ಯಾಬ್ರಿಕ್‌ಗಳ ಮೇಲೆ ಸಾಕಾರಗೊಂಡಿದೆ.

ಕಲಾವಿದೆ ಕುಸುಮ ರಂಗೋಲಿ ಕಲೆಯಲ್ಲಿ ಮಾತ್ರ ಪಳಗಿದವರಲ್ಲ. ಸಂಗೀತ, ವೀಣೆ, ಭರತನಾಟ್ಯಗಳಲ್ಲೂ ಅಭಿರುಚಿ ಇದ್ದು ಇವುಗಳಲ್ಲೂ ಸಾಧನೆಯ ಹಾದಿ ತೋರಿದವರು. ಆಂಗ್ಲಸಾಹಿತ್ಯದಲ್ಲಿ ಬಿಎ ಆನರ್ಸ್ ಪದವೀಧರೆಯಾದ ಕುಸುಮ, ರಂಗೋಲಿ, ಕುಂದನ್, ಕುಸುರಿ ಕಲೆಗಳನ್ನು ಹವ್ಯಾಸವಾಗಿ ಆರಂಭಿಸಿದವರು.

ಕುಸುಮ ಅವರಿಗೆ ರಂಗೋಲಿ ಕಲೆಯಲ್ಲಿ ಚಿಕ್ಕಂದಿನಿಂದಲೂ ಆಸಕ್ತಿ ಇದ್ದರೂ ಒಂದು ದಿನವೂ ಮನೆಯ ಮುಂದೆ ರಂಗೋಲಿ ಕಲೆಯ ಚಿತ್ತಾರ ಬಿಡಿಸಿದವರಲ್ಲ. ವಾಕಿಂಗ್ ಹೋಗುವಾಗಲೆಲ್ಲ ಬೇರೆಯವರ ಮನೆ ಮುಂದೆ ಮಹಿಳೆಯರು ಬಿಡಿಸುತ್ತಿದ್ದ ಚಿತ್ತಾಕರ್ಷಕ ರಂಗೋಲಿಯನ್ನು ಗಮನಿಸುತ್ತಾ ಬಂದವರು. ಅನಿವಾರ್ಯವಾಗಿ ತಮ್ಮ ಮನೆಯ ಮುಂದೆಯೂ ರಂಗೋಲಿ ಹಾಕಬೇಕಾಗಿ ಬಂದ ಸಂದರ್ಭ ಇವರನ್ನು ರಂಗೋಲಿಯಲ್ಲಿ ಸುಮಾರು 450 ಕ್ಕೂ ಹೆಚ್ಚು ವಿನ್ಯಾಸಗಳನ್ನು ಕಲಿಯುವಂತೆ ಪ್ರೇರೇಪಿಸಿತ್ತು.

ಅದೊಂದು ದಿನ. ಕುಸುಮ ಅವರ ತಾಯಿಗೆ ಮಂಡಿನೋವಿನ ಸಮಸ್ಯೆ ಉಲ್ಬಣಿಸಿತ್ತು. ನಿತ್ಯವೂ ಮನೆಯಂಗಳಲ್ಲಿ ರಾರಾಜಿಸುತ್ತಿದ್ದ ರಂಗೋಲಿ ಕಲೆಯನ್ನು ಮುಂದುವರಿಸಲು ಮಗಳು ಕುಸುಮ ಅವರಿಗೆ ಹೇಳಿದರು. ಅಲ್ಲಿಯವರೆಗೆ ಕುಸುಮ ಒಂದು ಸರಳ ರೇಖೆಯನ್ನು ಸಹ ನೇರವಾಗಿ ಎಳೆದವರಲ್ಲ. ಗುಂಡಗೆ ಸೊನ್ನೆ ಸುತ್ತಲೂ ಬರದು. ದೇವಿಯ ಮೇಲೆ ಭಾರ ಹಾಕಿ, ಕೈಯ್ಯಲ್ಲಿ ಸೀಮೆಸುಣ್ಣ ಹಿಡಿದು, ಬೃಂದಾವನದ ಮುಂದೆ ಕುಳಿತು ಧ್ಯಾನಾಸಕ್ತಳಾದ ಕುಸುಮ ಅವರಿಗೆ ಪವಾಡ ಸದೃಶವಾದ ಅನುಭವ. ವಿನ್ಯಾಸಗಳು ಮೇಲಿಂದ ಮೇಲೆ, ಸ್ವೇಚ್ಛೆಯಾಗಿ



